# ಪ್ರಾರ್ಥನೆ

ರಾಗ – ಕಲ್ಯಾಣಿ ತಾಳ – ಅಟತಾಳ

**ಕೇಳನೋ, ಹರಿ ತಾಳನೋ ।**

**ತಾಳ ಮೇಳಗಳಿದ್ದು ಪ್ರೇಮವಿಲ್ಲದ ಗಾನ ॥**

**ತಂಬೂರಿ ಮೊದಲಾದ ಅಖಿಳ ವಾದ್ಯಗಳಿದ್ದು**
**ಕೊಂಬು ಕೊಳಲು ಧ್ವನಿ ಸ್ವರಗಳಿದ್ದು**
**ತುಂಬುರು ನಾರದರ ಗಾನ ಕೇಳುವ ಹರಿ**
**ನಂಬಲಾರ ಈ ಡಂಭಕರ ಕೂಗಾಟ ॥ ೧ ॥**

**ನಾನಾ ಬಗೆಯ ರಾಗ ಭಾವ ತಿಳಿದು ಸ್ವರ**
**ಜ್ಞಾನ ಮನೋಧರ್ಮ ಜಾತಿಯಿದ್ದು**
**ದಾನವಾರಿಯ ದಿವ್ಯನಾಮರಹಿತವಾದ**
**ಹೀನ ಸಂಗೀತ ಸಾಹಿತ್ಯಕ್ಕೆ ಮನವಿತ್ತು ॥ ೨ ॥**

**ಅಡಿಗಡಿಗಾನಂದ ಬಾಷ್ಪಪುಳಕದಿಂದ**
**ನಡೆ ನುಡಿಗೆ ಶ್ರೀಹರಿಯೆನ್ನುತ**
**ದೃಢಭಕ್ತರನು ಕೂಡಿ ಹರಿ ಕೀರ್ತನೆ ಪಾಡಿ**
**ಕಡೆಗೆ ಪುರಂದರವಿಠಲನೆಂದರೆ ಕೇಳ್ವ ॥ ೩ ॥**

**–ಪುರಂದರದಾಸರು**

ರಾಗ – ಕಲ್ಯಾಣವಸಂತ ತಾಳ – ರೂಪಕ

**ನಾದಲೋಲುಡೈ ಬ್ರಹ್ಮಾನಂದ ಮಂದನೇ ॥ ಮನಸಾ ॥**

**ಸ್ವಾದು ಫಲಪ್ರದ ಸಪ್ತಸ್ವರ ರಾಗ ನಿಚಯಸಹಿತ ॥ ನಾ ॥**

**ಹರಿಹರಾತ್ಮಜ ಭೂಸುರಪತಿ ಶರಜನ್ಮ ಗಣೇಶಾದಿ**
**ವರಮೌನುಲುಪಾಸಿಂಚರೇ**
**ಧರ ತ್ಯಾಗರಾಜು ದೆಲಿಯು ॥ ನಾ॥**

ಓ ಮನಸ್ಸೇ, ನಾದದಲ್ಲಿ ತಲ್ಲೀನನಾಗಿ ಬ್ರಹ್ಮಾನಂದವನ್ನು ಹೊಂದು. ಸಪ್ತಸ್ವರಗಳಿಂದ ಕೂಡಿದ, ಸ್ವಾದಿಷ್ಟವಾದ ಸತ್ಫಲಗಳನ್ನು ನೀಡುವ, ಹಲವು ರಾಗಗಳಿಂದ ಕೂಡಿರುವ ನಾದವೇ ಅದು.

ಹರಿ–ಹರ–ಬ್ರಹ್ಮರು, ಇಂದ್ರ , ಗಣೇಶ, ಸುಬ್ರಹ್ಮಣ್ಯ ಮೊದಲಾದ ದೇವತೆಗಳು, ಶ್ರೇಷ್ಠ ಮುನಿಗಳು ಈ ರೀತಿಯ ಉಪಾಸನೆಯನ್ನು ಮಾಡಿದರು. ತ್ಯಾಗರಾಜನಿಗೆ ಇದು ತಿಳಿದಿದೆ.

**–ತ್ಯಾಗರಾಜರು**

# ಸೂಕ್ತಿಪ್ರಭ

ಯಾರೇ ಆಗಲಿ ಹಾಡುವುದರಲ್ಲೋ, ಬಾಜಿಸುವುದರಲ್ಲೋ , ನರ್ತಿಸುವುದರಲ್ಲೋ ಅಥವಾ ಬೇರಾವ ಕಲೆಯಲ್ಲೋ ಪ್ರಾವೀಣ್ಯ ವನ್ನು ಪಡೆದರೆ, ಆತ ಪ್ರಯತ್ನಪಟ್ಟರೆ ಬಹುಬೇಗ ಭಗವಂತನ ಸಾಕ್ಷಾತ್ಕಾರ ಪಡೆಯಬಲ್ಲ. ಯಾವ ರೀತಿ ನೀವು ಬಹಳ ಅಭ್ಯಾಸ ಮಾಡಿ ಹಾಡಲು, ಬಾಜಿಸಲು, ನರ್ತಿಸಲು ಕಲಿಯುತ್ತೀರೋ, ಹಾಗೇ ಭಗವಂತನಲ್ಲಿ ಮನಸ್ಸು ನಿಲ್ಲಸಲೂ ಬಹಳವಾಗಿ ಅಭ್ಯಾಸ ಮಾಡಬೇಕು.

**–ಶ್ರೀರಾಮಕೃಷ್ಣ**

ಸಂಗೀತ ಅತ್ಯುತ್ತಮವಾದ ಕಲೆ. ಅದನ್ನು ಯಾರು ಅರ್ಥ ಮಾಡಿಕೊಳ್ಳುವರೋ ಅವರಿಗೆ ಅದೇ ಅತ್ಯುತ್ತಮವಾದ ಪೂಜೆ.

**–ಸ್ವಾಮಿ ವಿವೇಕಾನಂದ**

ಸಂಗೀತವು ವಿಶ್ವಕ್ಕೆ ಆತ್ಮವನ್ನು ನೀಡುವುದು, ಮನಸ್ಸಿಗೆ ರೆಕ್ಕೆ ನೀಡುವುದು, ಕಲ್ಪನೆಯನ್ನು ಹಾರಾಡಲು ಬಿಡುವುದು, ಹಾಗೂ ಜೀವನಕ್ಕೆ ಪ್ರತಿಯೊಂದನ್ನೂ ನೀಡುವುದು.

**–ಪ್ಲೇಟೋ**

ಸಂಗೀತವು ನಿಸ್ಸಂದೇಹವಾಗಿಯೂ ಅನಂತದ ಸಮೀಪದ ವರೆಗೆ ಹಾಗೂ ವಸ್ತುಗಳ ಆಂತರ್ಯದ ವರೆಗೂ ಹೋಗುವುದು. ಏಕೆಂದರೆ, ಅದು ಸಂಪೂರ್ಣವಾಗಿ ದೈವೀ ವಾಹಕವಾದ 'ಶಬ್ದ' ವನ್ನೇ ಅವಲಂಬಿಸಿದೆ.

**–ಶ್ರೀ ಅರವಿಂದರು**

ಸಂಗೀತಗಾರನಿಗೆ ಭಗವಂತನಲ್ಲಿ ಒಂದಾಗಲು ಅತ್ಯುತ್ತಮ ಮಾರ್ಗವೇ ಸಂಗೀತ.

**–ಹಜ್ರತ್ ಇನಯತ್ ಖಾನ್**

*(ಸೂಫೀ ಸಾಧಕ ಹಾಗೂ ಸಂಗೀತಗಾರ)*

ಭಾರತೀಯ ಸಂಗೀತವು ಶ್ರೋತೃವನ್ನು ದೈನಂದಿನ ಬದುಕಿನ ಸುಖದುಃಖಗಳಾಚೆಗೆ, ಏಕಾಂತ ಹಾಗೂ ತ್ಯಾಗ–ವೈರಾಗ್ಯಗಳಿರುವ ಜಗತ್ತಿನ ಮೂಲದ ನೆಲೆಗೆ ಕರೆದೊಯ್ಯುವುದು.

**–ರವೀಂದ್ರನಾಥ ಠಾಗೋರ್**